ಕೊಡುತ್ತೀರಿ ಎಂದು ಕೇಳಿದ್ದೆ. ಅದಕ್ಕೂ ಕೂಡಾ ಉತ್ತರವನ್ನು ಕೊಟ್ಟಿಲ್ಲ. ಇವೆಲ್ಲವನ್ನೂ ಹೇಳದಿದ್ದರೆ ನಾವು ತಾನೇ ಇಲ್ಲಿ ಏನು ಮಾಡುವುದಕ್ಕಾಗುತ್ತದೆ ?

(ಗೊಂದಲ)

ಶ್ರೀ ಸಿ. ಬೈರೇಗೌಡ —ಒಂದು ಪಂಪುಸೆಟ್ಟಿಗೆ.....

(ಗೊಂದಲ)

ಶ್ರೀ ಜಿ. ರಾಜುಗೌಡ.—ಉತ್ತರ ಹೇಳುತ್ತಾರೆ. ಕುಳಿತುಕೊಳ್ಳಿ.....

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಕನಿಷ್ಟ ಪಕ್ಷ ಕೇಂದ್ರ ಸರ್ಕಾರದವರು.....

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ನಾವು ೧೦ ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡುವುದಕ್ಕೆ ತಯಾರಾಗಿದ್ದೇವೆ ಎಂದು ಹೇಳಿದರು. ಆದಕ್ಕೆ ನಾವು ಕ್ಲಾರಿಫಿಕೇಶನ್ ನಿಮಗೆ ಕೇಳಿದ್ದು. ಇದರಲ್ಲಿ ನಿಮ್ಮ ಪಾರ್ಟಿಸಿಪೇಷನ್ ಎಷ್ಟು ಎಂದು. ನಿಮ್ಮ ಪಾರ್ಟಿಸಿಪೇಷನ್ ಬಗ್ಗೆ ನೀವು ಹೇಳುವುದಕ್ಕೆ ಸಿದ್ಧವಿಲ್ಲ ಎಂದರೆ ನಾವು ಕೆಲಸ ಹೇಗೆ ಮಾಡಬೇಕು. ಇಷ್ಟು ದೂರ ನಾವು ಹೋಗುತ್ತೇವೆ. ನಾಲ್ಕನೇ ಒಂದು ಭಾಗ ಕೊಡುತ್ತೇವೆ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಈ ರೀತಿ ನೀವು ರೈತರ ಬಗ್ಗೆ ನಿರ್ಲಕ್ಷ ತೋರಿಸುತ್ತಿದ್ದೀರಿ. ಅನ್ಯಥಾ ಸರ್ಕಾರಕ್ಕೆ ನಾವು ವಿರೋಧ ಮಾಡಬೇಕಾಗುತ್ತದೆ. ನಿಮ್ಮ ಧೋರಣೆಯನ್ನು ಪ್ರತಿಭಟಿಸಿ ನಾವು ಸಭೆಯಿಂದ ಹೊರಗೆ ಹೋಗುತ್ತೇವೆ.....

(ಗೊಂದಲ)

(ಜನತಾ ದಳದ ಸದಸ್ಯರುಗಳು ಶ್ರೀ ಡಿ. ಬಿ. ಚಂದ್ರೇಗೌಡರ ನೇತೃತ್ವದಲ್ಲಿ ಸಭಾ ತ್ಯಾಗವನ್ನು ಮಾಡಿದರು)

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊನಲೇ ಡಿಸೈಡ್ ಮಾಡಿದ್ದೀರಿ ಎಂದು ಕಾಣುತ್ತದೆ.....

ಶ್ರೀ ಸಿ. ಬೈರೇಗೌಡ.—ಕೋಲಾರ ಜಿಲ್ಲೆ ಬಗ್ಗೆ ನಾನು ಪ್ರಶ್ನೆ ಕೇಳಿದೆ. ಒಂದು ಇರಿಗೇಷನ್ ಪಂಪ್‌ಸೆಟ್‌ಗೆ ಪವರ್ ಕೊಡುವುದಕ್ಕೆ ೩ ವರ್ಷ ತಡ ಆಗುತ್ತಿದೆ. ಈ ಬಜೆಟ್‌ನಲ್ಲಿ ಏನೂ ಇಟ್ಟಿಲ್ಲ. ಮಂತ್ರಿ ಇವೊತ್ತಿನ ದಿವಸ.....

(ಗೊಂದಲ)

ಶ್ರೀ ಸಿ. ಬೈರೇಗೌಡ.—ಮೂರು ವರ್ಷದಿಂದ ಏನೂ ಆಗುತ್ತಿಲ್ಲ. ಒಂದು ಇರಿಗೇಷನ್ ಪಂಪ್ ಸೆಟ್‌ಗೆ ಪವರ್ ಕೊಡಬೇಕಾಗಿದ್ದರ ಬಗ್ಗೆ ಇವೊತ್ತಿನ ದಿವಸ ಈ ಬಜೆಟ್‌ನಲ್ಲಿ ಹಣ ಏನೂ ಇಟ್ಟಿಲ್ಲ. ಇದನ್ನು ನಾನು ಪ್ರತಿಭಟನೆ ಮಾಡುತ್ತೇನೆ ಹಾಗೂ ಈ ಸಭೆಯಿಂದ ಸಭಾತ್ಯಾಗ ಮಾಡುತ್ತೇನೆ.

(ಜನತಾ ಪಕ್ಷದ ಸದಸ್ಯರು ಶ್ರೀ ಬೈರೇಗೌಡರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು.—"೩೧-೩-೧೯೯೦ರ ಅಂತ್ಯಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದ ಬೇಡಿಕೆ ಸಂಖ್ಯೆ ೧ ರಿಂದ ೬೧ರ ವರೆಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ಮೆಚ್ಚಪನ್ನು ವಹಿಸಲು ಸರ್ಕಾರಕ್ಕೆ ಆಯಾ ಬೇಡಿಕೆಗಳಿಗೆ ಸಂಬಂಧಿಸಿದ ಲೇಖಾನಂದಾನಕ್ಕೆ ಸೇರಿದ ಬೇಡಿಕೆಗಳ ಮೊಬಲಗುಗಳಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ.

(ಪ್ರಸ್ತಾಪ ಅಂಗೀಕಾರವಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು)

ಮಂಜೂರಾದ ಬೇಡಿಕೆಗಳ ಪಟ್ಟಿಯನ್ನು ಇದಕ್ಕೆ ಲಗತ್ತಿಸಲಾಗಿದೆ